ಶ್ರೀ ವಾಟಾಳ್ ನಾಗರಾಜ್. — ಪೋಲೀಸ್‌ನವರು ವೀರಪ್ಪನ್‌ನ್ನು ಹಿಡಿಯಲು ಹೋಗಿದ್ದರಿಂದ ಅವನ ಕಡೆಯವರು ಇವತ್ತು ನಮ್ಮ ರೈತನನ್ನು ಗುಂಡಿಟ್ಟು ಕೊಂದಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಇದ್ದರೆ ಹೇಳಲಿ. ಆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಈ ಸಭೆಗೆ ತಿಳಿಸಲಿ.

ಅಧ್ಯಕ್ಷರು. — ಮೊದಲು ನೀವು ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್. — ನಾವು ನಿಮ್ಮ ಹತ್ತಿರ ಮಾತನಾಡಲು ನಿಮ್ಮ ಕೊಠಡಿ ಬಾಗಲಿಗೆ ಬಂದಾಗ ಯಾರೋ ಇಬ್ಬರು ನಮ್ಮನ್ನು ಹಿಡಿದುಕೊಂಡು ನಮ್ಮ ಕತ್ತನ್ನು ಹಿಸುಕಿಬಿಟ್ಟಾಗ, ಅದನ್ನು ಪ್ರಸ್ತಾಪ ಮಾಡಲು ಸಹ ನೋಟೀಸ್ ಕೊಡಿ ಎಂದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು. — ಆ ರೀತಿ ಮಾಡಿದಾಗ ಇಲ್ಲಿ ಎದ್ದು ನಿಂತು ಹೇಳಿ. ಆದರೆ ಈ ವಿಚಾರದಲ್ಲಿ ಮಾತ್ರ ನೋಟೀಸ್ ಕೊಡಿ. ಈಗ ಮಾನ್ಯ ಕಾಜಲಗಿ ಅವರು ನಿಯಮ ೩೫೪ರ ಮೇರೆಗೆ ವಿಷಯ ಪ್ರಸ್ತಾಪ ಮಾಡಬಹುದು.

೧೨-೩೦ ಪಿ. ಎಂ.

ನಿಯಮ ೩೫೪ರ ಮೇರೆಗೆ

೧) ಬೈಲಹೊಂಗಲದಿಂದ ನಗರಕ್ಕೆ ಸುವಿಹಾರಿ ಬಸ್ಸನ್ನು ಪ್ರಾರಂಭಿಸಲು ಒತ್ತಾಯ

ಶ್ರೀ ಶಿವಾನಂದ ಎಚ್. ಕೌಜಲಗಿ. — ಅಧ್ಯಕ್ಷರೇ, ಬೈಲಹೊಂಗಲ ನಗರವು ಬಹು ದೊಡ್ಡ ವ್ಯಾಪಾರಿ ಕೇಂದ್ರವಾಗಿದ್ದು ಪ್ರತಿ ದಿನ ಬೈಲಹೊಂಗಲ ನಗರದಿಂದ ಬೆಂಗಳೂರಿಗೆ ವ್ಯಾಪಾರಸ್ಥರು ವಕೀಲರು ಬೆಂಗಳೂರು ನಗರಕ್ಕೆ ಬರುತ್ತಾರೆ. ಆದಕಾರಣ ಪ್ರತಿ ದಿನ ಸಂಜೆಗೆ ಬೈಲಹೊಂಗಲದಿಂದ ಬೆಂಗಳೂರಿಗೆ ಸುವಿಹಾರಿ ಬಸ್ಸನ್ನು ಮತ್ತು ಬೆಂಗಳೂರಿನಿಂದ ಬೈಲಹೊಂಗಲಕ್ಕೆ ಸುವಿಹಾರಿ ಬಸ್ಸನ್ನು ಕೂಡಲೇ ಪ್ರಾರಂಭಿಸಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು). — ಅಧ್ಯಕ್ಷರೇ, ಬೆಂಗಳೂರಿನಿಂದ ಬೈಲಹೊಂಗಲಕ್ಕೆ ಸುವಿಹಾರಿ ಬಸ್ಸನ್ನು ಪ್ರಾರಂಭಿಸಲು ಈಗಾಗಲೇ ತೀರ್ಮಾನಿಸಲಾಗಿದೆ. ಈಗ ಪಳೆಗಾಲ ಪ್ರಾರಂಭವಾಗಿರುವುದರಿಂದ ಕೈಗೊಂಡ ತೀರ್ಮಾನದಂತೆ ಪಳೆಗಾಲ ಮುಗಿದ ಮೇಲೆ ಬೆಂಗಳೂರು ಬೈಲಹೊಂಗಲದ ಮಧ್ಯ ಸುವಿಹಾರಿ ಬಸ್ ಸೇವೆಯನ್ನು ಪ್ರಾರಂಭಿಸಲಾಗುವುದು.

೨) ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ). — ಅಧ್ಯಕ್ಷರೇ, ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ರೆವಿನ್ಯೂ ಗ್ರಾಮಗಳಾಗಿ ಪರಿವರ್ತನೆ ಮಾಡಬೇಕೆಂದು ಬಹಳಷ್ಟು ವರ್ಷಗಳಿಂದ ಈ ಜನಾಂಗದವರು ಸರ್ಕಾರದ ಮುಂದೆ ಬೇಡಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಯವರು ಸಹ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹಿಂದೆ ಇದು ಈ ಸದನದಲ್ಲಿ ಸಹ ಚರ್ಚೆ ಆಗಿದೆ, ಇಲ್ಲಿಯವರೆಗೂ ಅವರ ಬೇಡಿಕೆಯನ್ನು ಸರ್ಕಾರ ಪೂರೈಸಿಲ್ಲ. ಅವು ರೆವಿನ್ಯೂ ಗ್ರಾಮಗಳಾದರೆ ಸರ್ಕಾರದಿಂದ ಬರತಕ್ಕ ನೇರವಾದ ಸೌಲಭ್ಯಗಳೆಲ್ಲಾ ಸಿಗುತ್ತವೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ನಿಖರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು). — ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಒಂದು ನೂರು ಅಥವಾ ಅದಕ್ಕಿಂತ ಹೆಚ್ಚು ಕುಟುಂಬಗಳಿರುವ ಅಥವಾ ಐದು ನೂರು ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ ಮಧ್ಯೆ, ಕೇಂದ್ರ ಸರ್ಕಾರವು ೧೯೯೧ರ ಜನಗಣತಿ ಕಾರ್ಯವು ಸಂಪೂರ್ಣಗೊಳ್ಳುವವರೆಗೆ ಅಂದರೆ ೩೦.೬.೧೯೯೧ರವರೆಗೆ ಯಾವುದೇ ಜಿಲ್ಲೆ: ತಾಲ್ಲೂಕು: ಗ್ರಾಮಗಳ ಸರಹದ್ದನ್ನು ಬದಲಾಯಿಸಬಾರದೆಂದು ಸೂಚನೆ ನೀಡಿರುತ್ತದೆ. ಈ ಕಾರಣದಿಂದ ಲಂಬಾಣಿ ತಾಂಡಾಗಳನ್ನು ಕಂದಾಯ